**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-01**

**ಸಂಖ್ಯೆ: ಡಿ.ಎಸ್. ಇ.ಆರ್.ಟಿ/ಇ.ವಿ.ಜಿ/1-10ಮೌಲ್ಯಾಂಕನ/2023-24 ದಿನಾಂಕ: 30-12-2023**

**ಪರಿಷ್ಕೃತ ಸುತ್ತೋಲೆ**

ವಿಷಯ: 2023-24 ನೇ ಸಾಲಿನ 5, 8 ಮತ್ತು 9 ನೇ ತರಗತಿ ಮೌಲ್ಯಾಂಕನ ಪರೀಕ್ಷೆಗೆ ಪಠ್ಯವಸ್ತು ಮತ್ತು ಅಂಕಗಳನ್ನು ನಿಗದಿಪಡಿಸುವ ಬಗ್ಗೆ.

ಉಲ್ಲೇಖ: 1. ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ರವರ ಸುತ್ತೋಲೆ ಸಂಖ್ಯೆ: ಡಿ.ಎಸ್.ಇ.ಆರ್.ಟಿ/ಇ.ವಿ.ಜಿ/1-10 ಮೌಲ್ಯಾಂಕನ/2023-24 ದಿನಾಂಕ: 01-07-2023

2. ದಿನಾಂಕ: 28-12-2023 ರಂದು ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ KSEAB ಯಲ್ಲಿ ನಡೆದ ಸಭೆ.

*****

ಮೇಲ್ಕಂಡ ಉಲ್ಲೇಖಿತ ವಿಷಯಕ್ಕೆ ಸಂಬಂಧಿಸಿದಂತೆ, 1 ರಿಂದ 10ನೇ ತರಗತಿಯ ಮೌಲ್ಯಾಂಕನಕ್ಕೆ ಸಂಬಂಧಿಸಿದ ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ರವರ ಸುತ್ತೋಲೆ ಸಂಖ್ಯೆ: ಡಿ.ಎಸ್.ಇ.ಆರ್.ಟಿ/ಇ.ವಿ.ಜಿ/1-10 ಮೌಲ್ಯಾಂಕನ/2023-24 ದಿನಾಂಕ: 01-07-2023 ರಲ್ಲಿನ 5, 8 ಮತ್ತು 9ನೇ ತರಗತಿ ಮೌಲ್ಯಾಂಕನದ ಮಾಹಿತಿಯನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗಿದ್ದು, ಅದರಂತೆ ಕ್ರಮವಹಿಸಲು ಸೂಚಿಸಲಾಗಿದೆ.

| ದಿನಾಂಕ: 01-07-2023 ರ ಮೌಲ್ಯಾಂಕನ ಸುತ್ತೋಲೆಯಲ್ಲಿರುವಂತೆ | ಪರಿಷ್ಕರಿಸಿರುವ ಅಂಶಗಳು |
|---|---|
| **1 ರಿಂದ 5 ನೇ ತರಗತಿ**<br>**ಸಂಕಲನಾತ್ಮಕ ಮೌಲ್ಯಮಾಪನ - SA 2**<br>➢ ಆಯಾ ತರಗತಿ ಮತ್ತು ವಿಷಯಕ್ಕೆ ನಿಗದಿ ಪಡಿಸಿದ ಶೇ 50 ರಷ್ಟು ಪಠ್ಯವನ್ನು ಪರಿಗಣಿಸುವುದು.<br>➢ 30 ಲಿಖಿತ + 20 ಮೌಖಿಕ = 50 ಅಂಕಗಳಿಗೆ ಪರೀಕ್ಷೆ ನಡೆಸಿ, ಇದನ್ನು 20 ಅಂಕಗಳಿಗೆ ಪರಿವರ್ತಿಸುವುದು.<br>➢ ಇಂಗ್ಲೀಷ್ ಭಾಷೆಗೆ 10 ಲಿಖಿತ+40 ಮೌಖಿಕ=50 ಅಂಕಗಳಿಗೆ ಪರೀಕ್ಷೆ ನಡೆಸಿ, ಇದನ್ನು 20 ಅಂಕಗಳಿಗೆ ಪರಿವರ್ತಿಸುವುದು.<br>ಆಯಾ ತರಗತಿ ಮತ್ತು ವಿಷಯಕ್ಕೆ ನಿಗದಿಪಡಿಸಿದ SA-1 ರ ಮೌಲ್ಯಮಾಪನಕ್ಕೆ ಪರಿಗಣಿಸಿದ ನಂತರ ಉಳಿದ ಶೇ.50 ರಷ್ಟು ಪಠ್ಯವನ್ನು ಪರಿಗಣಿಸುವುದು. | **5ನೇ ತರಗತಿ ಮೌಲ್ಯಾಂಕನ:**<br>• 2023-24 ನೇ ಸಾಲಿನ ಶೈಕ್ಷಣಿಕ ಮಾರ್ಗದರ್ಶಿಯಲ್ಲಿ ನೀಡಿರುವಂತೆ ನವೆಂಬರ್-2023 ರಿಂದ ಫೆಬ್ರುವರಿ-2024 ರವರೆಗಿನ ಪಠ್ಯವಸ್ತುವನ್ನು ಪರಿಗಣಿಸುವುದು.<br>• SA-2 ಗೆ ಬದಲಾಗಿ ನಡೆಸುವ ಮೌಲ್ಯಾಂಕನಕ್ಕೆ ಎಲ್ಲಾ ಭಾಷೆ ಮತ್ತು ಕೋರ್ ವಿಷಯಗಳಿಗೆ 10 ಅಂಕಗಳಿಗೆ ಮೌಖಿಕ ಮತ್ತು 40 ಅಂಕಗಳಿಗೆ ಲಿಖಿತ, ಒಟ್ಟಾರೆ 50 ಅಂಕಗಳಿಗೆ ಮೌಲ್ಯಾಂಕನ ನಡೆಸಿ 20 ಅಂಕಗಳಿಗೆ ಪರಿವರ್ತಿಸುವುದು<br>• ಅಂತಿಮವಾಗಿ ಫಲಿತಾಂಶ ನಿರ್ಣಯಿಸಲು FA-1, FA-2, FA-3, FA-4, SA-1 ಮತ್ತು SA-2 ಗಳ ಅಂಕಗಳನ್ನು 15+15+15+15+20+20=100 ರಂತೆ ಪರಿಗಣಿಸುವುದು.<br>• ಶಾಲೆಗಳಿಂದ SATS ನಲ್ಲಿ ದಾಖಲಿಸಿರುವ FA-1, FA-2, FA-3, FA-4 ಮತ್ತು SA-1 ಅಂಕಗಳೊಂದಿಗೆ SA-2 ನ ಪರಿವರ್ತಿಸಿದ 20 ಅಂಕಗಳನ್ನು ಮೇಲ್ಕಂಡಂತೆ ಪರಿಗಣಿಸಿ ಫಲಿತಾಂಶ ನಿರ್ಣಯಿಸುವುದು. |
| **6 ರಿಂದ 8 ನೇ ತರಗತಿ**<br>**ಸಂಕಲನಾತ್ಮಕ ಮೌಲ್ಯಮಾಪನ - SA 2**<br>➢ ಆಯಾ ತರಗತಿ ಮತ್ತು ವಿಷಯಕ್ಕೆ ನಿಗದಿ | **8ನೇ ತರಗತಿ ಮೌಲ್ಯಾಂಕನ**<br>• 2023-24 ನೇ ಸಾಲಿನ ಶೈಕ್ಷಣಿಕ ಮಾರ್ಗದರ್ಶಿಯಲ್ಲಿ ನೀಡಿರುವಂತೆ ಜೂನ್-2023 ರಿಂದ ಫೆಬ್ರುವರಿ-2024 ರವರೆಗಿನ ವಾರ್ಷಿಕ ಪಠ್ಯವಸ್ತುವನ್ನು |

| | |
|---|---|
| ಪಡಿಸಿದ ಶೇ 50 ರಷ್ಟು ಪಠ್ಯವನ್ನು ಪರಿಗಣಿಸುವುದು.<br>➢ 40 ಲಿಖಿತ + 10 ಮೌಖಿಕ = 50 ಅಂಕಗಳಿಗೆ ಪರೀಕ್ಷೆ ನಡೆಸಿ, ಇದನ್ನು 30 ಅಂಕಗಳಿಗೆ ಪರಿವರ್ತಿಸುವುದು.<br>➢ ಇಂಗ್ಲೀಷ್ ಭಾಷೆಗೆ 10 ಲಿಖಿತ+40 ಮೌಖಿಕ=50 ಅಂಕಗಳಿಗೆ ಪರೀಕ್ಷೆ ನಡೆಸಿ, ಇದನ್ನು 20 ಅಂಕಗಳಿಗೆ ಪರಿವರ್ತಿಸುವುದು.<br>ಆಯಾ ತರಗತಿ ಮತ್ತು ವಿಷಯಕ್ಕೆ ನಿಗದಿಪಡಿಸಿದ SA-1 ರ ಮೌಲ್ಯಮಾಪನಕ್ಕೆ ಪರಿಗಣಿಸಿದ ನಂತರ ಉಳಿದ ಶೇ.50 ರಷ್ಟು ಪಠ್ಯವನ್ನು ಪರಿಗಣಿಸುವುದು. | ಪರಿಗಣಿಸುವುದು. SA-2 ಗೆ ಬದಲಾಗಿ ನಡೆಸುವ ಮೌಲ್ಯಾಂಕನಕ್ಕೆ ಎಲ್ಲಾ ಭಾಷೆ ಮತ್ತು ಕೋರ್ ವಿಷಯಗಳಿಗೆ 10 ಅಂಕಗಳಿಗೆ ಮೌಖಿಕ ಮತ್ತು 50 ಅಂಕಗಳಿಗೆ ಲಿಖಿತ, ಒಟ್ಟಾರೆ 60 ಅಂಕಗಳಿಗೆ ನಡೆಸಿ ನಂತರ 30 ಅಂಕಗಳಿಗೆ ಪರಿವರ್ತಿಸುವುದು.<br>• ಅಂತಿಮವಾಗಿ ಫಲಿತಾಂಶ ನಿರ್ಣಯಿಸಲು FA-1, FA-2, FA-3, FA-4, SA-1 ಮತ್ತು SA-2 ಗಳ ಅಂಕಗಳಿಗೆ 10+10+10+10+30+30=100 ರಂತೆ ಪರಿಗಣಿಸುವುದು.<br>• ಶಾಲೆಗಳಿಂದ SATS ನಲ್ಲಿ ದಾಖಲಿಸಿರುವ FA-1, FA-2, FA-3, FA-4, SA-1 ಅಂಕಗಳೊಂದಿಗೆ SA-2 ನ ಪರಿವರ್ತಿಸಿದ 30 ಅಂಕಗಳನ್ನು ಮೇಲ್ಕಂಡಂತೆ ಪರಿಗಣಿಸಿ ಫಲಿತಾಂಶ ನಿರ್ಣಯಿಸುವುದು.<br>**ವಿಶೇಷ ಸೂಚನೆ:** ಪ್ರಸ್ತುತ ಮೇಲ್ಕಂಡಂತೆ 8ನೇ ತರಗತಿ SA-2 ಮೌಲ್ಯಾಂಕನಕ್ಕೆ ಜೂನ್ 2023 ರಿಂದ ಫೆಬ್ರವರಿ-2024 ರವರೆಗಿನ ವಾರ್ಷಿಕ ಪಠ್ಯವಸ್ತುವನ್ನು ಪರಿಗಣಿಸುವುದರಿಂದಾಗಿ ವಿದ್ಯಾರ್ಥಿಗಳಿಗೆ ಮುಂಬರುವ 9ನೇ ಮತ್ತು 10ನೇ ತರಗತಿಯ ಪರೀಕ್ಷೆಯನ್ನು ಬರೆಯಲು ರೂಢಿಯಾದಂತಾಗಿ ಉತ್ತಮ ಅಭ್ಯಾಸಕ್ಕೆ ಸಹಕಾರಿಯಾಗುತ್ತದೆ. |
| **9ನೇ ತರಗತಿಗೆ ಸಂಕಲನಾತ್ಮಕ ಮೌಲ್ಯಮಾಪನ SA-2**<br>**(ಅಂತಿಮ ವಾರ್ಷಿಕ ಪರೀಕ್ಷೆ)**<br>➢ 9ನೇ ತರಗತಿಯ ಆಯಾ ಭಾಷೆ ಹಾಗೂ ವಿಷಯಕ್ಕೆ ನಿಗದಿಪಡಿಸಿದ ವಾರ್ಷಿಕ ಶೇ.100 ರಷ್ಟು ಪಠ್ಯವನ್ನು ಪರಿಗಣಿಸುವುದು.<br>➢ ಪ್ರಥಮ ಭಾಷೆಗೆ 100 ಅಂಕಗಳು, ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಿಗೆ 80 ಅಂಕಗಳಿಗೆ ಲಿಖಿತ ಪರೀಕ್ಷೆಯನ್ನು ನಡೆಸುವುದು.<br>➢ ನಾಲ್ಕು ರೂಪಣಾತ್ಮಕ ಮೌಲ್ಯಾಂಕನಗಳ (FA-1+FA-2+FA-3+FA-4)=ಒಟ್ಟು 200 ಅಂಕಗಳನ್ನು ಪ್ರಥಮ ಭಾಷೆಗೆ 25 ಅಂಕಗಳಿಗೆ ಹಾಗೂ ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಿಗೆ 20 ಅಂಕಗಳಿಗೆ ಪರಿವರ್ತಿಸಿ ಆಂತರಿಕ ಮೌಲ್ಯಮಾಪನಕ್ಕೆ ಪರಿಗಣಿಸುವುದು.<br>➢ ಪ್ರಥಮ ಭಾಷೆ-100 ಲಿಖಿತ+25 ಆಂತರಿಕ = 125 ಅಂಕಗಳು<br>➢ ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಿಗೆ-80 ಲಿಖಿತ + 20 ಆಂತರಿಕ = 100 ಅಂಕಗಳಿಗೆ ಮೌಲ್ಯಮಾಪನ ನಡೆಸುವುದು. | **9ನೇ ತರಗತಿ ಮೌಲ್ಯಾಂಕನ**<br>• 9ನೇ ತರಗತಿಯ SA-2 ಮೌಲ್ಯಾಂಕನಕ್ಕೆ ಆಯಾ ಭಾಷೆ ಹಾಗೂ 3 ಕೋರ್ ವಿಷಯಗಳಿಗೆ ನಿಗದಿಪಡಿಸಿದ ವಾರ್ಷಿಕ ಶೇ.100 ರಷ್ಟು ಪಠ್ಯವನ್ನು ಪರಿಗಣಿಸುವುದು.<br>• **ಆಂತರಿಕ ಮೌಲ್ಯಮಾಪನ:** ನಾಲ್ಕು ರೂಪಣಾತ್ಮಕ ಮೌಲ್ಯಾಂಕನಗಳ (FA-1+FA-2+FA-3+FA-4)= 50+50+50+50 = ಒಟ್ಟು 200 ಅಂಕಗಳಿಗೆ ನಿರ್ವಹಿಸಿ ನಂತರ ಪ್ರಥಮ ಭಾಷೆ 25 ಅಂಕಗಳಿಗೆ ಹಾಗೂ ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ 3 ಕೋರ್ ವಿಷಯಗಳಿಗೆ ತಲಾ 20 ಅಂಕಗಳಿಗೆ ಪರಿವರ್ತಿಸಿ ಅಂದರೆ 25+20+20+20+20+20 = ಒಟ್ಟು 125 ಅಂಕಗಳಿಗೆ ಪರಿವರ್ತಿಸಿ ಆಂತರಿಕ ಮೌಲ್ಯಮಾಪನಕ್ಕೆ ಪರಿಗಣಿಸುವುದು.<br>• **SA-2 ಮೌಲ್ಯಾಂಕನ:** ಪ್ರಥಮ ಭಾಷೆಗೆ 100 ಅಂಕಗಳು, ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಿಗೆ ತಲಾ 80 ಅಂಕಗಳಿಗೆ ಅಂದರೆ 100+80+80+80+80+80 = ಒಟ್ಟು 500 ಅಂಕಗಳಿಗೆ ಮೌಲ್ಯಾಂಕನ / ಲಿಖಿತ ಪರೀಕ್ಷೆಯನ್ನು ನಡೆಸುವುದು.<br>• ಅಂತಿಮವಾಗಿ ಫಲಿತಾಂಶ ನಿರ್ಧರಿಸಲು ಆಂತರಿಕ ಮೌಲ್ಯಮಾಪನದ ಅಂಕಗಳು ಮತ್ತು SA-2 ಬದಲಾಗಿ ನಡೆಸುವ ಮೌಲ್ಯಾಂಕನ ಲಿಖಿತ ಪರೀಕ್ಷೆಯ ಅಂಕಗಳನ್ನು ಪರಿಗಣಿಸುವುದು. |

| | |
|---|---|
| ➢ ಅಂತಿಮ ವಾರ್ಷಿಕ ಪರೀಕ್ಷೆಯ ಅಂಶಗಳನ್ನು ಆಧರಿಸಿ ಫಲಿತಾಂಶವನ್ನು ನಿರ್ಧರಿಸುವುದು. | |

ಮೇಲಿನ ತಿದ್ದುಪಡಿ ಅಂಶಗಳನ್ನು ಪರಿಗಣಿಸಿ 5, 8 ಮತ್ತು 9ನೇ ತರಗತಿ ಮೌಲ್ಯಾಂಕನ ಮತ್ತು ಮೌಲ್ಯಮಾಪನ ಕಾರ್ಯಗಳನ್ನು ಕೈಗೊಳ್ಳಲು ಸೂಚಿಸಿದೆ.

20.20.2020

**ಆಯುಕ್ತರು**
ಶಾಲಾ ಶಿಕ್ಷಣ ಇಲಾಖೆ,

**ಗೆ,**

1. ನಿರ್ದೇಶಕರು, DSERT ಮತ್ತು ನಿರ್ದೇಶಕರು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, ಬೆಂಗಳೂರು ರವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಹಾಗೂ ಉಪನಿರ್ದೇಶಕರು (ಅಭಿವೃದ್ಧಿ)ರವರಿಗೆ ಅಗತ್ಯ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಉಪನಿರ್ದೇಶಕರು (ಆಡಳಿತ) ರವರ ಮೂಲಕ ಅಗತ್ಯ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಅಗತ್ಯ ಕ್ರಮಕ್ಕಾಗಿ

**ಪ್ರತಿಯನ್ನು:**

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿರವರಿಗೆ ಕಳುಹಿಸುತ್ತಾ ಮಾನ್ಯ ಸಚಿವರ ಗಮನಕ್ಕೆ ತರಲು ಕೋರಿದೆ.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ರವರಿಗೆ ಗೌರವ ಪೂರ್ವಕವಾಗಿ ಅವಗಾಹನೆಗೆ ಸಲ್ಲಿಸಿದೆ.
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ ಆಯುಕ್ತಾಲಯ ಮತ್ತು ಕಲಬುರಗಿ, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ ಆಯುಕ್ತಾಲಯ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
5. ರಾಜ್ಯದ ಎಲ್ಲಾ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ ರವರಿಗೆ ಅನುಪಾಲನೆಗಾಗಿ.
6. ಕಛೇರಿ ಪ್ರತಿ.